RNU AIR DHARWAD

MAY 23, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕಲಬುರಗಿ ಜಿಲ್ಲೆ, ಸೇಡಂ'ನ, ಬರ ಪ್ರದೇಶಕ್ಕೆ, ಏತ ನೀರಾವರಿ: ಸಚಿವ ಸಂಪುಟದ ಒಪ್ಪಿಗೆ.**
- **ರಾಜ್ಯದ 40 ಸಾವಿರದ 225 ಕೆರೆಗಳ ಸಂರಕ್ಷಣೆಗೆ, ಸಣ್ಣ ನೀರಾವರಿ ಇಲಾಖೆ, ಯೋಜನೆ.**
- **ಬೆಂಗಳೂರು ಲಾಲ್‌ಬಾಗ್‌ನಲ್ಲಿ, ಇಂದಿನಿಂದ, ಸಾವಯವ ಮಾವು ಮತ್ತು ಹಲಸಿನ ಮೇಳ.**
- **'ಅಮೃತ ಭಾರತ ರೈಲು ನಿಲ್ದಾಣ ಯೋಜನೆ': ರಾಜ್ಯದ ನವೀಕೃತ ಐದು ನಿಲ್ದಾಣಗಳು, ಪ್ರಧಾನಮಂತ್ರಿಯವರಿಂದ ಲೋಕಾರ್ಪಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಕಲಬುರಗಿ ಜಿಲ್ಲೆ, ಸೇಡಂ ತಾಲೂಕಿನ, ಬರ ಪೀಡಿತ ಪ್ರದೇಶಗಳಿಗೆ, ನೀರಾವರಿ ಸೌಲಭ್ಯ ಕಲ್ಪಿಸಲು, 89 ಕೋಟಿ 30 ಲಕ್ಷ ರೂಪಾಯಿ, ಅಂದಾಜು ಮೊತ್ತದಲ್ಲಿ, ಏತ ನೀರಾವರಿ ಯೋಜನೆ ಕಾಮಗಾರಿಗೆ, ಸಚಿವ ಸಂಪುಟ ಅನುಮೋದಿಸಿದೆ.**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ, ನಡೆಯಿತು. ಬಳಿಕ ಮಾಹಿತಿ ನೀಡಿದ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ, ರಾಯಚೂರು ಜಿಲ್ಲೆ, ಸಿಂಧನೂರಿನ ತಾಲೂಕು ಆಸ್ಪತ್ರೆಯನ್ನು, 200 ಹಾಸಿಗೆಗಳ ಸಾಮರ್ಥ್ಯದ ಜಿಲ್ಲಾ ಮಟ್ಟದ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಲಾಗಿದೆ, ಎಂದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ, ಮೈಕ್ರೋ ಯೋಜನೆಯಡಿ, 40 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ, ರಾಯಚೂರಿನಲ್ಲಿ, ಸುಸಜ್ಜಿತ ಜಿಲ್ಲಾ ಸಮುದಾಯ ಕೇಂದ್ರ ನಿರ್ಮಾಣಕ್ಕೆ, ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದರು.**

<><><>

**ಸತತ ಮಳೆ ಹಿನ್ನೆಲೆ, ರಾಜ್ಯದ ಗ್ರಾಮೀಣ ಭಾಗದ ಜನ, ಆರೋಗ್ಯ ಕಾಪಾಡಿಕೊಳ್ಳಲು ಮುನ್ನೆಚ್ಚರಿಕೆ ವಹಿಸುವಂತೆ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಕೋರಿದ್ದಾರೆ. ಕುಡಿಯುವ ನೀರು ಕಲುಷಿತಗೊಳ್ಳುವ ಸಾಧ್ಯತೆ ಇದ್ದು, ನೀರನ್ನು ಕಾಯಿಸಿ, ಆರಿಸಿ ಸೇವಿಸಬೇಕು. ಗ್ರಾಮೀಣ ನೀರು ಸರಬರಾಜು ಇಲಾಖೆಯ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಪ್ರತಿ ಗ್ರಾಮದಲ್ಲಿಯೂ ನಿಯಮಿತವಾಗಿ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ**

ಪರೀಕ್ಷೆಗೆ ಒಳಪಡಿಸಬೇಕು ಎಂದು, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ. ಶಾಲೆಗಳು ಪುನರಾರಂಭವಾಗುವ ದಿನಗಳು ಸಮೀಪಿಸಿರುವುದರಿಂದ, ಪೋ ಕರು ಮಕ್ಕಳ ಆರೋಗ್ಯದ ಕಡೆ, ನಿಗಾ ವಹಿಸುವಂತೆ ಮನವಿ ಮಾಡಿದ್ದಾರೆ.

<><><>

ರಾಜ್ಯದ **40** ಸಾವಿರದ **225** ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, 'ನಮ್ಮ ಕೆರೆ – **2025**, ಆರೋಗ್ಯಯುತ ಕೆರೆಗಳು, ಆರೋಗ್ಯಕರ ಜೀವಗಳು' ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ, ಮಾತನಾಡಿದರು. ಕೆರೆ ಸಂರಕ್ಷಣೆ ಆಯ್ಕೆಯಲ್ಲ; ಅದು ಜೀವಪಾಲನೆಯ ಹೊಣೆಗಾರಿಕೆ. ಕಳೆದ ಎರಡು ವ ರ್ಗಗಳಲ್ಲಿ, ರಾಜ್ಯಾದ್ಯಂತ **12** ಸಾವಿರ ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ ಎಂದರು.

<><><>

ಬಳ್ಳಾರಿ ತಾಲೂಕಿನ ಜಾನೆಕುಂಟೆ, ವೇಣಿ ವೀರಾಪುರ, ಹಲಕುಂದಿ ಬೆಳಗಲ್ಲು ಗ್ರಾಮಗಳಲ್ಲಿ, ಗಣಿಗಾರಿಕೆ ಪ್ರಭಾವಕ್ಕೆ ಒಳಗಾದ ವಲಯದಡಿ, ಸಮಗ್ರ ಪರಿಸರ ಯೋಜನೆ ಅನುಷ್ಠಾನ ಗೊಳಿಸಲಾಗುತ್ತಿದೆ. ಜಲಾನಯನ ಅಭಿವೃದ್ಧಿ, ಕೃಷಿ ಇಲಾಖೆ ಹಾಗೂ ಲಿಂಗಸಗೂರು ಗ್ರಾಮ್ಸ್ ಸಂಸ್ಥೆ ಸಹಯೋಗದಲ್ಲಿ, ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ, ಸಮಗ್ರ ಪರಿಸರ ಯೋಜನೆ ಅನು ್ಠಾನಗೊಳಿಸಲಾಗುತ್ತಿದೆ. ಹಲಕುಂದಿ ಬೆಳಗಲ್ಲು ಉಪ ಜಲಾನಯನ ಯೋಜನಾ ವ್ಯಾಪ್ತಿಯಲ್ಲಿ, **4** ಸಾವಿರದ **196** ಹೆಕ್ಟರ್ ಪ್ರದೇಶದಲ್ಲಿ, ಒಟ್ಟು **6** ಹಳ್ಳಿಗಳಲ್ಲಿ, ಕಾರ್ಯಗತಗೊಳ್ಳುತ್ತಿದೆ.

<><><>

ಕರ್ನಾಟಕದ ಜೇನುತುಪ್ಪಕ್ಕೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಹಾಗೂ ಮಾರುಕಟ್ಟೆ ಒದಗಿಸಲು, ತೋಟಗಾರಿಕೆ ಇಲಾಖೆಯಿಂದ, "ಝೇಂಕಾರ", ಜೀವನೋಲ್ಲಾಸಕ್ಕೆ ಜೇನು ಎಂಬ, ಬ್ರ್ಯಾಂಡ್ ನೊಂದಾಯಿಸಲಾಗಿದೆ ಎಂದು, ತೋಟಗಾರಿಕಾ ಖಾತೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ **15** ಎಕರೆ ವಿಸ್ತೀರ್ಣದ ಲಿಂಗಾಬುಧಿ ಸಸ್ಯ ಶಾಸ್ತ್ರೀಯ ತೋಟವನ್ನು ಲೋಕಾರ್ಪಣೆಗೊಳಿಸಲಾಗಿದೆ. ಮೈಸೂರು ಮಲ್ಲಿಗೆ, ವೀಳ್ಯದೆಲೆ ಹಾಗೂ ನಂಜನಗೂಡು ರಸಬಾಳೆ ಸಂರಕ್ಷಣೆಗಾಗಿ, **14** ಹೆಕ್ಟರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆ ಹಾಗೂ **175** ರೈತರಿಗೆ ತರಬೇತಿ ನೀಡಲಾಗಿದೆ ಎಂದರು.

<><><>

ಈ ವರೆಗೆ ರಾಜ್ಯದ, **30** ಸಾವಿರದ **266** ಗಿಗ್ ಕಾರ್ಮಿಕರು, ರಾಜ್ಯ ಗಿಗ್ ಕಾರ್ಮಿಕರ ಜೀವ ವಿಮೆ ಹಾಗೂ ಅಪಘಾತ ವಿಮಾ ಯೋಜನೆ ಅಡಿ ಹೆಸರು ನೊಂದಾಯಿದಸಿದ್ದಾರೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್ ತಿಳಿಸಿದ್ದಾರೆ. ಗಿಗ್ ವಲಯದಲ್ಲಿ ದುಡಿಯುವ ಶ್ರಮಿಕರಿಗೆ, ಜೀವನ ಭದ್ರತೆ ಒದಗಿಸಬೇಕು ಎಂಬ, ತಮ್ಮ ನಾಯಕ ರಾಹುಲ ಗಾಂಧಿ ಅವರ ಆಶಯದಂತೆ, ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು, ನಿರ್ಧರಿಸಲಾಗಿದೆ, ಎಂದಿದ್ದಾರೆ.

<><><>

**PM E-DRIVE** ಯೋಜನೆಯ, ಮೊದಲ ಹಂತದಲ್ಲಿ, ಬೆಂಗಳೂರು ನಗರಕ್ಕೆ **4** ಸಾವಿರದ **500** ಇಲೆಕ್ಟ್ರಿಕ್ ಬಸ್‌ಗಳನ್ನು, ಹಂಚಿಕೆ ಮಾಡುವ ಭರವಸೆಯನ್ನು, ಕೇಂದ್ರ ಬೃಹತ್ ಮತ್ತು ಉಕ್ಕು ಕೈಗಾರಿಕೆ ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ, ಹೊಸ ದಿಲ್ಲಿಯಲ್ಲಿ ನೀಡಿದ್ದಾರೆ. ಬೆಂಗಳೂರು ಸೇರಿದಂತೆ, ದೇಶದ **5** ಪ್ರಮುಖ ನಗರಗಳಿಗೆ, **10** ಸಾವಿರದ **900** ಇಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ. ಇಲೆಕ್ಟ್ರಿಕ್ ಬಸ್‌ಗಳ ಬಳಕೆ

ಹಾಗೂ ನಿರ್ವಹಣೆಗೆ ಅಗತ್ಯವಾದ, ಪೂರಕ ಮೂಲಸೌಕರ್ಯ ಒದಗಿಸಲು, ಅಧಿಕಾರಿಗಳಿಗೆ ನಿರ್ದೇಶಿಸಿದ್ದಾಗಿ ಸಚಿವರು ತಿಳಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ತೋಟಗಾರಿಕೆ ಇಲಾಖೆ, ಜೈವಿಕ ಕೃಷಿಕ್ ಸೊಸೈಟಿ ಸಹಯೋಗದಲ್ಲಿ, ಬೆಂಗಳೂರಿನ ಲಾಲ್‌ಬಾಗ್‌ನ, ಎಂ.ಎಚ್. ಮರೀಗೌಡ ಸಭಾಂಗಣದಲ್ಲಿ, ಇಂದಿನಿಂದ 25ರ ವರೆಗೆ, ಮೂರು ದಿನಗಳ, ಸಾವಯವ ಮಾವು ಮತ್ತು ಹಲಸಿನ ಮೇಳ ಆಯೋಜಿಸಿದೆ. ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ ಮಾಹಿತಿ ನೀಡಿ, ಇಂದು ಮಧ್ಯಾಹ್ನ 3 ಗಂಟೆಗೆ, ತೋಟಗಾರಿಕೆ ಮತ್ತು ರೇ ್ಮೆ ಇಲಾಖೆ ಕಾರ್ಯದರ್ಶಿ, ಶಮ್ಲಾ ಇಕ್ಬಾಲ್ ಮೇಳವನ್ನು ಉದ್ಘಾಟಿಸಲಿದ್ದಾರೆ. ನಾಳೆ ಹಾಗೂ ನಾಡಿದ್ದು, ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ, ಮಾವು ಮತ್ತು ಹಲಸು ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ, ಎಂದರು.

<><><>

ಪ್ರದೇಶ ಸಮಾಚಾರಕ್ಕಾಗಿ ಮೇಳದ ಕುರಿತು, ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಜೈವಿಕ ಕೃಷಿಕ್ ಸೊಸೈಟಿ ಗೌರವ ಅಧ್ಯಕ್ಷ, ಡಾಕ್ಟರ್ ಕೆ. ರಾಮಕೃಷ್ಣಪ್ಪ.

<><><>

ಡಾಕ್ಟರ್ ಕೆ. ರಾಮಕೃಷ್ಣಪ್ಪ ಧ್ವನಿ 30 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಜಸ್ಥಾನದ ಬಿಕಾನೇರ್‌ನಲ್ಲಿ, 'ಅಮೃತ ಭಾರತ ರೈಲು ನಿಲ್ದಾಣ ಯೋಜನೆ'ಯಡಿ, ದೇಶಾದ್ಯಂತ ಪುನರಾಭಿವೃದ್ಧಿಗೊಳಿಸಲಾದ, 103 ರೈಲು ನಿಲ್ದಾಣಗಳನ್ನು, ವಿಡಿಯೋ ಕಾನ್ಫರೆನ್ಸ್ ಮೂಲಕ ಲೋಕಾರ್ಪಣೆಗೊಳಿಸಿದರು. ಕರ್ನಾಟಕದ ಧಾರವಾಡ, ಗದಗ, ಗೋಕಾಕ್ ರಸ್ತೆ, ಬಾಗಲಕೋಟೆ ಹಾಗೂ ಮುನಿರಾಬಾದ್, ರೈಲು ನಿಲ್ದಾಣಗಳು, ಈ ಪಟ್ಟಿಯಲ್ಲಿವೆ. ಬಳಿಕ ಮಾತನಾಡಿದ, ಪ್ರಧಾನಮಂತ್ರಿ ನರೇಂದ್ರ ಮೋದಿ, ಅವರು..

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 44 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿತ್ವದ ಫಲವಾಗಿ, ದೇಶ ಪ್ರಗತಿಯತ್ತ ಸಾಗುತ್ತಿದೆ. 'ಅಮೃತ ಭಾರತ ರೈಲು ನಿಲ್ದಾಣ ಯೋಜನೆ', ಒಂದು ಮಾದರಿಯಾಗಿದೆ ಎಂದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ಧಾರವಾಡದ ಅಮೃತ ರೈಲು ನಿಲ್ದಾಣದ ಉದ್ಘಾಟನಾ ಸಮಾರಂಭದಲ್ಲಿ ಅವರು, ಮಾತನಾಡಿದರು.

<><><>

ಬಸವರಾಜ ಹೊರಟ್ಟಿ ಧ್ವನಿ 33 ಸೆಕೆಂದುಗಳು

<><><>

ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಮಾತನಾಡಿ, 'ಆತ್ಮನಿರ್ಭರ ಭಾರತ ಅಭಿಯಾನ'ದ ಮೂಲಕ, ಪ್ರಸ್ತುತ ರಾಜ್ಯದಲ್ಲಿ, 50 ಸಾವಿರದ 792 ಕೋಟಿ ರೂಪಾಯಿ ಮೌಲ್ಯದ, ವಿವಿಧ ರೈಲು ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

'ನಮ್ಮೆಲ್ಲರ ಭವಿಷ್ಯಕ್ಕಾಗಿ ಜೌಗು ನೆಲಗಳನ್ನು ಸಂರಕ್ಷಿಸೋಣ' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಕಡಲಾಮೆ ದಿನ ಆಚರಿಸಲಾಗುತ್ತಿದೆ.

<><><>

ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ, ಪ್ರತಿ ಮನೆಯ ಮಾತಾಗಬೇಕು ಎಂದು, ಚಿತ್ರದುರ್ಗ ತಾಲೂಕು ಆರೋಗ್ಯಾಧಿಕಾರಿ ಡಾಕ್ಟರ್ ಬಿ.ವಿ.ಗಿರೀಶ್ ಹೇಳಿದ್ದಾರೆ.

<><><>

ಅರಬ್ಬಿ ಸಮುದ್ರದಲ್ಲಿ, ಚಂಡ ಮಾರುತದ ಅಬ್ಬರ ಹೆಚ್ಚಿದ ಹಿನ್ನೆಲೆ, ಉಡುಪಿ ಜಿಲ್ಲೆಗೆ, ಹವಾಮಾನ ಇಲಾಖೆ, ಆರೇಂಜ್ ಅಲರ್ಟ್, ಘೋಷಿಸಿದೆ.

<><><>

ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ, ಎಂ.ಎ.ಸಲೀಂ, ನೇಮಕಗೊಂಡಿದ್ದಾರೆ.

<><><>

ಪರಿಶಿಷ್ಟ ಜಾತಿ, ಒಳ ಮೀಸಲಾತಿ ವರ್ಗೀಕರಣ ದತ್ತಾಂಶ ಸಂಗ್ರಹಣೆಗಾಗಿ ನಡೆದಿರುವ, ಸಮೀಕ್ಷೆ ಅವಧಿಯನ್ನು, ಈ ತಿಂಗಳ 28 ರ ವರೆಗೆ ವಿಸ್ತರಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಲಬುರಗಿ ಜಿಲ್ಲೆ, ಸೇಡಂ'ನ, ಬರ ಪ್ರದೇಶಕ್ಕೆ, ಏತ ನೀರಾವರಿ; ಸಚಿವ ಸಂಪುಟದ ಒಪ್ಪಿಗೆ.
- ರಾಜ್ಯದ 40 ಸಾವಿರದ 225 ಕೆರೆಗಳ ಸಂರಕ್ಷಣೆಗೆ, ಸಣ್ಣ ನೀರಾವರಿ ಇಲಾಖೆ, ಯೋಜನೆ.
- ಬೆಂಗಳೂರು ಲಾಲ್‌ಬಾಗ್‌ನಲ್ಲಿ, ಇಂದಿನಿಂದ, ಸಾವಯವ ಮಾವು ಮತ್ತು ಹಲಸಿನ ಮೇಳ.
- 'ಅಮೃತ ಭಾರತ ರೈಲು ನಿಲ್ದಾಣ ಯೋಜನೆ'; ರಾಜ್ಯದ ನವೀಕೃತ ಐದು ನಿಲ್ದಾಣಗಳು, ಪ್ರಧಾನಮಂತ್ರಿಯವರಿಂದ ಲೋಕಾರ್ಪಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>